# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು-572 103

ಸಂಖ್ಯೆ :ತುವಿ:ವಿ.ವಿ.ಪ/ಸಿಂ.ವಿ/2023-24/4321 ದಿನಾಂಕ: 13.02.2024

ಇವರಿಗೆ,

ಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಎಲ್ಲಾ ಸದಸ್ಯರುಗಳಿಗೆ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಮಾನ್ಯರೆ,

ವಿಷಯ: 2023-24ನೇ ಸಾಲಿನ ಎರಡನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ಕಾರ್ಯಸೂಚಿಗಳನ್ನು ಕಳುಹಿಸುತ್ತಿರುವ ಕುರಿತು

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ 2023-24ನೇ ಸಾಲಿನ ಎರಡನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯನ್ನು ದಿನಾಂಕ:21.02.2024ರ ಬುಧವಾರ ಬೆಳಿಗ್ಗೆ 10:00 ಗಂಟೆಗೆ ಡಾ. ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರದ ಡಾ.ಜಗದಾಂಬ ಚಿವುಕುಲ ಕಟ್ಟಡ, ವಿಶ್ವವಿದ್ಯಾನಿಲಯ ಆವರಣ, ಬಿ.ಹೆಚ್.ರಸ್ತೆ, ತುಮಕೂರು-572103 ಇಲ್ಲಿ ಏರ್ಪಡಿಸಲಾಗಿದ್ದು, ಸದರಿ ಸಭೆಯಲ್ಲಿ ಚರ್ಚಿಸಲಿರುವ ಕಾರ್ಯಸೂಚಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ, ಕಳುಹಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಉಪಕುಲಸಚಿವರು
(ಸಿಂಡಿಕೇಟ್/ಶೈಕ್ಷಣಿಕ ಪರಿಷತ್ ವಿಭಾಗ)
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಅಡಕ: ಎರಡನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ಕಾರ್ಯಸೂಚಿಗಳು

ಪ್ರತಿಗಳು:

1. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಕಚೇರಿ ಪ್ರತಿ.

# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು– 572 103

ಸಭಾ ಸಂಖ್ಯೆ: ಸಾ.ವಿ.ವಿ.ಪ–02 ದಿನಾಂಕ: 21.02.2024 ಸಮಯ: ಬೆಳಿಗ್ಗೆ: 10.00

## 2023–24ನೇ ಸಾಲಿನ ಎರಡನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ಕಾರ್ಯಸೂಚಿಗಳು

| ಕ್ರ.ಸಂ. | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ಪುಟ ಸಂಖ್ಯೆ |
|---|---|---|---|
| ದಿನಾಂಕ 22.12.2023ರಂದು ನಡೆದ ಪ್ರಥಮ ಸಾಮಾನ್ಯ ವಿದ್ಯಾವಿಷಯಕ ಪರಿಷತ್ತು ಸಭಾ ನಡಾವಳಿಗಳ ದೃಢೀಕರಣ | | | |
| ಶೈಕ್ಷಣಿಕ ವಿಭಾಗ | | | |
| 1. | 2023–24.ಸಾ.ವಿ.ಪ–02 ಶೈ.ವಿ–01 | ತುಮಕೂರು ವಿಶ್ವವಿದ್ಯಾನಿಲಯದ Institutional Development Plan ರೂಪಿಸಿರುವ ಕುರಿತು. | 1 |
| 2. | 2023–24.ಸಾ.ವಿ.ಪ–02 ಶೈ.ವಿ–02 | ಸ್ನಾತಕೋತ್ತರ Food & Nutrition ಕೋರ್ಸ್‌ನ ಟೈಟಲ್ಲನ್ನು (ತಲೆಬರಹ) Food Science & Nutrition ಎಂಬುದಾಗಿ ಬದಲಾಯಿಸುವ ಕುರಿತು. | 2 |
| 3. | 2023–24.ಸಾ.ವಿ.ಪ–02 ಶೈ.ವಿ–03 | ಸ್ನಾತಕೋತ್ತರ M.Sc Industrial Mathematics and Applied Computing, M.Sc Computer Science ಮತ್ತು M.Sc Data Science ವಿಷಯಗಳ ಪಠ್ಯಕ್ರಮಗಳನ್ನು ಸಲ್ಲಿಸಿರುವ ಕುರಿತು. | 3 |
| 4. | 2023–24.ಸಾ.ವಿ.ಪ–02 ಶೈ.ವಿ–04 | ಸ್ವಾಮಿ ವಿವೇಕಾನಂದರ ಜೀವನ ಹಾಗೂ ಬೋಧನೆ ಕುರಿತು ಮುಕ್ತ ಆಯ್ಕೆ ಪತ್ರಿಕೆಯ ಪಠ್ಯವನ್ನು ಅಳವಡಿಸಿಕೊಳ್ಳಲು ಅನುಮೋದನೆ ಕುರಿತು. | 4 |
| 5. | 2023–24.ಸಾ.ವಿ.ಪ–02 ಶೈ.ವಿ–05 | ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಪಠ್ಯಕ್ರಮವನ್ನು ಅಳವಡಿಸಿಕೊಳ್ಳುವ ಕುರಿತು. | 5 |
| 6. | 2023–24.ಸಾ.ವಿ.ಪ–02 ಶೈ.ವಿ–06 | ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗೀಯ ಪರಿಷತ್ (Department Council) ರಚಿಸಿ ಅಧಿಸೂಚಿಸಿರುವ ಕ್ರಮವನ್ನು ಸ್ಥಿರೀಕರಣದ ಕುರಿತು. | 6 |
| ಪರೀಕ್ಷಾ ವಿಭಾಗ | | | |
| 7. | 2023–24.ಸಾ.ವಿ.ಪ–02 ಪ.ವಿ–01 | ಯು.ಯು.ಸಿ.ಎಂ.ಎಸ್ ತಂತ್ರಾಂಶದಲ್ಲಿ ಮರುಮೌಲ್ಯಮಾಪನ ಮತ್ತು ತೃತೀಯ ಮೌಲ್ಯಮಾಪನ ಮಾಡುವ ಮಾನದಂಡದ ಕುರಿತು ಹಾಗೂ ಶೇ. 15 ಕ್ಕಿಂತ ಕಡಿಮೆ ಅಂಕಗಳಿಸಿರುವ ವಿದ್ಯಾರ್ಥಿಗಳಿಗೆ ಛಾಯಾಪ್ರತಿ / ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿರುವ ಕುರಿತು. | 7 |
| 8. | 2023–24.ಸಾ.ವಿ.ಪ–02 ಪ.ವಿ–02 | ವಿವಿಧ ಸ್ನಾತಕ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾದ ವಿದ್ಯಾರ್ಥಿಗಳನ್ನು ವಿಚಾರಣಾ ಸಮಿತಿಯ ಮುಂದೆ ವಿಚಾರಣೆಗೆ ಒಳಪಡಿಸಲಾಗಿದ್ದು, ಸದರಿ ಸಭೆಯ ನಡವಳಿಯ ಕುರಿತು. | 8 |
| ಪಿಹೆಚ್.ಡಿ ವಿಭಾಗ | | | |
| 9. | 2023–24.ಸಾ.ವಿ.ಪ–02 ಪಿಹೆಚ್.ಡಿ–01 | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಮತ್ತು ವಿದ್ಯುನ್ಮಾನ ಪಿಹೆಚ್.ಡಿ ಅಧ್ಯಯನ ಮಂಡಳಿ (BOS) ಗಳನ್ನು ರಚಿಸಿ ಅಧಿಸೂಚಿಸಿರುವ ಸಂಬಂಧ ವಿದ್ಯಾವಿಷಯಕ ಪರಿಷತ್ ಸಭೆಯ ಸ್ಥಿರೀಕರಣಕ್ಕೆ ಮಂಡಿಸುವ ಕುರಿತು. | 9 |

| ವಿಷಯ ಸಂಖ್ಯೆ | 2023–24: ಸಾ.ವಿ.ವಿ.ಪ–02 : ಶೈವಿ : 01 ದಿನಾಂಕ: 21.02.2024 |
|---|---|

**ವಿಷಯ: ತುಮಕೂರು ವಿಶ್ವವಿದ್ಯಾನಿಲಯದ Institutional Development Plan ರೂಪಿಸಿರುವ ಕುರಿತು.**

*****

ತುಮಕೂರು ವಿಶ್ವವಿದ್ಯಾನಿಲಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ–2020ರ ಅನ್ವಯ Institutional Development Plan ರಚಿಸಲು ಪ್ರೊ. ಬಿ.ಟಿ. ಸಂಪತ್ ಕುಮಾರ್ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ ಅಧಿಸೂಚನೆ ಹೊರಡಿಸಲಾಗಿತ್ತು. ಪ್ರಸ್ತುತ ಸದರಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಈ ಬಗ್ಗೆ ಚರ್ಚಿಸಿ Institutional Development Plan ನ್ನು ರಚಿಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ. ಸದರಿ Institutional Development Plan ನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿರುವುದರಿಂದ ಈ ವಿಷಯವನ್ನು ಸಕ್ಷಮ ಪ್ರಾಧಿಕಾರವಾದ ವಿದ್ಯಾವಿಷಯಕ ಪರಿಷತ್ತು **ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ** ಮಂಡಿಸಿದೆ.

| ವಿಷಯ ಸಂಖ್ಯೆ | 2023–24:ಸಾ.ವಿ.ವಿ.ಪ:02:ಶೈ.ವಿ.:02 ದಿನಾಂಕ:21.02.2024 |
|---|---|

**ವಿಷಯ:** ಸ್ನಾತಕೋತ್ತರ Food & Nutrition ಕೋರ್ಸ್‌ನ ಟೈಟಲ್ಲನ್ನು(ತಲೆಬರಹ) Food Science & Nutrition ಎಂಬುದಾಗಿ ಬದಲಾಯಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಂಯೋಜಕರು, ಸ್ನಾತಕೋತ್ತರ ಆಹಾರ ಮತ್ತು ಪೋಷಣೆ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಇವರು, ದಿನಾಂಕ:10.10.2022 ರಂದು ನಡೆದ ಆಹಾರ ಮತ್ತು ಪೋಷಣೆ ವಿಭಾಗದ ಶೈಕ್ಷಣಿಕ ಅಧ್ಯಯನ ಮಂಡಳಿ ಸಭೆಯಲ್ಲಿ ಈಗಿರುವ ಸ್ನಾತಕೋತ್ತರ Food & Nutrition ಕೋರ್ಸ್‌ನ ಟೈಟಲ್‌ನ್ನು Food Science & Nutrition ಎಂಬುದಾಗಿ ಬದಲಾಯಿಸಬೇಕೆಂದು ತೀರ್ಮಾನಿಸಿರುವುದರಿಂದ ಕೋರ್ಸ್ ಟೈಟಲ್‌ನ್ನು ಬದಲಾಯಿಸಬೇಕೆಂದು ಸಭಾ ನಡಾವಳಿಯೊಂದಿಗೆ ಸಂಯೋಜಕರು, ತಮ್ಮ ಮನವಿ ಪತ್ರದಲ್ಲಿ ಕೋರಿರುವ ಸಂಬಂಧ 2024–25 ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ Food & Nutrition (ಆಹಾರ ಮತ್ತು ಪೋಷಣೆ) ಕೋರ್ಸ್‌ನ ಟೈಟಲ್ಲನ್ನು Food Science & Nutrition (ಆಹಾರ ವಿಜ್ಞಾನ ಮತ್ತು ಪೋಷಣೆ) ಎಂಬುದಾಗಿ ಬದಲಾಯಿಸಿ ಅಧಿಸೂಚನೆ ಹೊರಡಿಸುವ ಸಂಬಂಧ ಸಕ್ಷಮ ಪ್ರಾಧಿಕಾರಗಳಾದ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2023–24: ಸಾ.ವಿ.ವಿ.ಪ:02:ಶೈವಿ:03 :ದಿನಾಂಕ:21.02.2024 |
|---|---|

**ವಿಷಯ:– ಸ್ನಾತಕೋತ್ತರ** M.Sc Industrial Mathematics and Applied Computing, M.Sc Computer Science **ಮತ್ತು** M.Sc Data Science **ವಿಷಯಗಳ ಪಠ್ಯಕ್ರಮಗಳನ್ನು ಸಲ್ಲಿಸಿರುವ ಕುರಿತು.**

* * * * *

2023–24ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ, ಸ್ನಾತಕೋತ್ತರ ಪಠ್ಯಕ್ರಮಗಳ ಪರಿಷ್ಕರಿಸುವ ಮತ್ತು ನೂತನವಾಗಿ ರಚಿಸುವ ಕುರಿತು ಸ್ನಾತಕೋತ್ತರ ಅಧ್ಯಯನ ಮಂಡಳಿಗಳ ಮುಖ್ಯಸ್ಥರುಗಳು ಅಧ್ಯಯನ ಮಂಡಳಿಗಳ ಸದಸ್ಯರೊಂದಿಗೆ ಸಭೆ ನಡೆಸಿ ಸಭಾ ನಡಾವಳಿಯೊಂದಿಗೆ ಪಠ್ಯಕ್ರಮಗಳನ್ನು ಸಿದ್ದಪಡಿಸಿ ಸಲ್ಲಿಸಿರುತ್ತಾರೆ.

1. M.Sc Industrial Mathematics and Applied Computing
2. M.Sc Computer Science
3. M.Sc Data Science

ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತಿಯಾಗಿರುವ M.Sc Industrial Mathematics and Applied Computing, M.Sc Computer Science ಮತ್ತು M.Sc Data Science ವಿಷಯಗಳ ಪಠ್ಯಕ್ರಮಗಳನ್ನು 2023–24ನೇ ಶೈಕ್ಷಣಿಕ ಸಾಲಿನಿಂದ ಅಳವಡಿಸಿಕೊಳ್ಳುವ ಸಂಬಂಧ ಅಧಿಸೂಚನೆ ಹೊರಡಿಸುವ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಕಾರ್ಯಸೂಚಿಯನ್ನು ಮಂಡಿಸಲಾಗಿದೆ.

| ವಿಷಯ ಸಂಖ್ಯೆ | 2023–24:.ಸಾ.ವಿವಿಪ:02:ಶೈವಿ:04 :ದಿನಾಂಕ:21.02.2024 |
|---|---|

ವಿಷಯ:– ಸ್ವಾಮಿ ವಿವೇಕಾನಂದರ ಜೀವನ ಹಾಗೂ ಭೋದನೆ ಕುರಿತ ಮುಕ್ತ ಆಯ್ಕೆ ಪತ್ರಿಕೆಯ ಪಠ್ಯವನ್ನು ಅಳವಡಿಸಿಕೊಳ್ಳಲು ಅನುಮೋದನೆ ಕುರಿತು.

ಉಲ್ಲೇಖ:– ಸಂಯೋಜಕರು, ಸ್ವಾಮಿ ವಿವೇಕಾನಂದ ಅಧ್ಯಯನ ಪೀಠ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರ ಪತ್ರದ ದಿನಾಂಕ:04.01.2024.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸ್ವಾಮಿ ವಿವೇಕಾನಂದರ ಜೀವನ ಹಾಗೂ ಭೋದನೆಯನ್ನು ವಿದ್ಯಾರ್ಥಿಗಳಿಗೆ ಮುಕ್ತ ಆಯ್ಕೆ ಪತ್ರಿಕೆಯನ್ನಾಗಿ 2ನೇ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಅಳವಡಿಸಲು ಅಧ್ಯಯನ ಮಂಡಳಿ ಸಭೆ ನಡೆಸಿ ಸದರಿ ಸಭೆಯ ಸಭಾ ನಡಾವಳಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ ಎಂಬ ಮಾಹಿತಿಯನ್ನು ತಮ್ಮ ಅವಗಾಹನೆಗೆ ತರುತ್ತಾ, ಈ ಸಂಬಂದದಲ್ಲಿ ವಿಶ್ವವಿದ್ಯಾನಿಲಯದ ಸಕ್ಷಮ ಪ್ರಾಧಿಕಾರವಾದ ವಿದ್ಯಾವಿಷಯಕ ಸಭೆಯ ಅನುಮೋದನೆ ಕೋರಿ ಕಾರ್ಯಸೂಚಿಯನ್ನು ಮಂಡಿಸಲಾಗಿದೆ.

| ವಿಷಯ ಸಂಖ್ಯೆ | 2023–24: ಸಾ.ವಿವಿಪ:2/ಶೈವಿ:05 :ದಿನಾಂಕ:21.02.2024 |
|---|---|

**ವಿಷಯ:– ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಪಠ್ಯಕ್ರಮವನ್ನು ಅಳವಡಿಸಿಕೊಳ್ಳುವ ಕುರಿತು.**

* * * * *

2023–24ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ, ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮಂಡಳಿಯು ಪಠ್ಯಕ್ರಮವನ್ನು ನೂತನವಾಗಿ ರಚಿಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಕ್ರಮವನ್ನು ಅನುಮೋದಿಸಿ, ಶೈಕ್ಷಣಿಕ ಹಿತದೃಷ್ಟಿಯಿಂದ 2023–24ನೇ ಶೈಕ್ಷಣಿಕ ಸಾಲಿನಿಂದ ಅಳವಡಿಸಿಕೊಳ್ಳಲು ಅಧಿಸೂಚನೆಯನ್ನು ಹೊರಡಿಸಿದ್ದು ಈ ಅಂಶವನ್ನು ಅವಗಾಹನೆಗೆ ತರುತ್ತಾ, ಈ ಸಂಬಂಧ ವಿಶ್ವವಿದ್ಯಾನಿಲಯದ ಸಕ್ಷಮ ಪ್ರಾಧಿಕಾರಗಳಾದ ವಿದ್ಯಾವಿಷಯಕ ಪರಿಷತ್ ಸಭೆಯ ಸ್ಥಿರೀಕರಣಕ್ಕೆ ಕಾರ್ಯಸೂಚಿಯನ್ನು ಮಂಡಿಸಲಾಗಿದೆ.

| ವಿಷಯ ಸಂಖ್ಯೆ | 2023-24:ಸಾ.ವಿ.ವಿ.ಪ:02:ಶೈ.ವಿ.:06 ದಿನಾಂಕ:21.02.2024 |
|---|---|

**ವಿಷಯ:** ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗೀಯ ಪರಿಷತ್ (Department Council)ರಚಿಸಿ ಅಧಿಸೂಚಿಸಿರುವ ಕ್ರಮವನ್ನು ಸ್ಥಿರೀಕರಣದ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ವಿಭಾಗೀಯ ಪರಿಷತ್‌ನ ಅವಧಿಯು ಮುಗಿದಿರುವ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ-2000 ರ ಪ್ರಕರಣ-34 ರ ಉಪ ಪ್ರಕರಣ(6) ರನ್ವಯ ಹಾಗೂ ಮಾನ್ಯ ಕುಲಪತಿಯವರ ಅನುಮೋದನೆಯ ಮೇರೆಗೆ ದಿನಾಂಕ:02.02.2024 ರಿಂದ ಜಾರಿಯಾಗುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಈ ಕೆಳಕಂಡ ವಿಭಾಗಗಳ ವಿಭಾಗೀಯ ಪರಿಷತ್ (Department Council)ನ್ನು ರಚಿಸಿ ಅಧಿಸೂಚಿಸಲಾಗಿರುವ ಕ್ರಮವನ್ನು ಸಕ್ಷಮ ಪ್ರಾಧಿಕಾರಗಳಾದ ವಿದ್ಯಾವಿಷಯಕ ಪರಿಷತ್ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

ವಿಭಾಗಗಳ ಹೆಸರು:

1. ಸ್ನಾತಕೋತ್ತರ ಕನ್ನಡ
2. ಸ್ನಾತಕೋತ್ತರ ಇಂಗ್ಲೀಷ್
3. ಸ್ನಾತಕೋತ್ತರ ಇತಿಹಾಸ & ಪ್ರಾಕ್ತನಾಶಾಸ್ತ್ರ
4. ಸ್ನಾತಕೋತ್ತರ ಅರ್ಥಶಾಸ್ತ್ರ
5. ಸ್ನಾತಕೋತ್ತರ ರಾಜ್ಯಶಾಸ್ತ್ರ
6. ಸ್ನಾತಕೋತ್ತರ ಸಮಾಜಕಾರ್ಯ
7. ಸ್ನಾತಕೋತ್ತರ ವಾಣಿಜ್ಯಶಾಸ್ತ್ರ
8. ಸ್ನಾತಕೋತ್ತರ ಭೌತಶಾಸ್ತ್ರ
9. ಸ್ನಾತಕೋತ್ತರ ಗ್ರಂಥಾಲಯ & ಮಾಹಿತಿ ವಿಜ್ಞಾನ
10. ಸ್ನಾತಕೋತ್ತರ ವ್ಯವಹಾರ ಆಡಳಿತ
11. ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ
12. ಸ್ನಾತಕೋತ್ತರ ಸಾವಯವ ರಸಾಯನಶಾಸ್ತ್ರ
13. ಸ್ನಾತಕೋತ್ತರ ಪ್ರಾಣಿಶಾಸ್ತ್ರ
14. ಸ್ನಾತಕೋತ್ತರ ಪತ್ರಿಕೋದ್ಯಮ & ಸಮೂಹ ಸಂವಹನ
15. ಸ್ನಾತಕೋತ್ತರ ಸಾರ್ವಜನಿಕ ಆಡಳಿತ
16. ಸ್ನಾತಕೋತ್ತರ ಎಂ.ಸಿ.ಎ
17. ಸ್ನಾತಕೋತ್ತರ ಪರಿಸರ ವಿಜ್ಞಾನ
18. ಸ್ನಾತಕೋತ್ತರ ಮನೋವಿಜ್ಞಾನ
19. ಸ್ನಾತಕೋತ್ತರ ಸೂಕ್ಷ್ಮಜೀವಶಾಸ್ತ್ರ
20. ಸ್ನಾತಕೋತ್ತರ ಸಮಾಜಶಾಸ್ತ್ರ
21. ಸ್ನಾತಕೋತ್ತರ ವಾಣಿಜ್ಯಶಾಸ್ತ್ರ(ಮಾ.ವ್ಯ)
22. ಸ್ನಾತಕೋತ್ತರ ಸಸ್ಯಶಾಸ್ತ್ರ
23. ಸ್ನಾತಕೋತ್ತರ ರಸಾಯನಶಾಸ್ತ್ರ
24. ಸ್ನಾತಕೋತ್ತರ ಜೀವರಸಾಯನಶಾಸ್ತ್ರ

| ವಿಷಯ ಸಂಖ್ಯೆ | 2023-24: ಸಾ.ವಿ.ಪ.:02: ಪ.ವಿ-01.: ದಿ.:21.02.2024 |
|---|---|

**ವಿಷಯ: ಯು.ಯು.ಸಿ.ಎಂ.ಎಸ್ ತಂತ್ರಾಂಶದಲ್ಲಿ ಮರುಮೌಲ್ಯಮಾಪನ ಮತ್ತು ತೃತೀಯ ಮೌಲ್ಯಮಾಪನ ಮಾಡುವ ಮಾನದಂಡದ ಕುರಿತು ಹಾಗೂ ಶೇ. 15 ಕ್ಕಿಂತ ಕಡಿಮೆ ಅಂಕಗಳಿಸಿರುವ ವಿದ್ಯಾರ್ಥಿಗಳಿಗೆ ಛಾಯಾಪ್ರತಿ/ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿರುವ ಕುರಿತು.**

* * * * *

**ಎ)** ರಾಷ್ಟ್ರೀಯ ಶಿಕ್ಷಣ ನೀತಿಯಡಿಯಲ್ಲಿ ವಿವಿಧ ಸ್ನಾತಕ ಪದವಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಫಲಿತಾಂಶವನ್ನು ಪ್ರಕಟಿಸಿದ ನಂತರ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ತುಮಕೂರು ವಿಶ್ವವಿದ್ಯಾನಿಲಯದ ಪರೀಕ್ಷಾ ಅಧಿಶಾಸನ–2021 ರನ್ವಯ ಅವಕಾಶವಿರುತ್ತದೆ.

ಮರುಮೌಲ್ಯಮಾಪನಗೊಂಡ ನಂತರ ಪ್ರಥಮ ಮೌಲ್ಯಮಾಪನದ ಅಂಕಗಳಿಗೂ ಹಾಗೂ ಮರು ಮೌಲ್ಯಮಾಪನದ ಅಂಕಗಳಿಗೂ ಶೇ. 15% ರಷ್ಟು ವ್ಯತ್ಯಾಸವಿದ್ದಲ್ಲಿ ಅಂತಹ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಾಗೂ ಪಾರದರ್ಶಕ ಮೌಲ್ಯಮಾಪನವಾಗುವ ಸಲುವಾಗಿ (ಬೋರ್ಡ್) ತೃತೀಯ ಮೌಲ್ಯಮಾಪನವನ್ನು ಮಾಡಿಸಬೇಕಾಗಿರುತ್ತದೆ. ಆದರೆ, "ಪರೀಕ್ಷಾ ಅಧಿಶಾಸನ–2021" ರಲ್ಲಿ ತೃತೀಯ (ಬೋರ್ಡ್) ಮೌಲ್ಯಮಾಪನಕ್ಕೆ ಅವಕಾಶವಿರುವುದಿಲ್ಲ. ಈ ಸಂಬಂಧ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ರಾಷ್ಟ್ರೀಯ ಶಿಕ್ಷಣ ನೀತಿಯಡಿಯ ವಿವಿಧ ಸ್ನಾತಕ ಪದವಿಯಲ್ಲಿ ತೃತೀಯ ಮೌಲ್ಯಮಾಪನವನ್ನು ಮಾಡಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ತುಮಕೂರು ವಿಶ್ವವಿದ್ಯಾನಿಲಯದ ಅಧಿಶಾಸನದಲ್ಲಿ ತೃತೀಯ ಮೌಲ್ಯಮಾಪನವಾಗಬೇಕಾದ ಉತ್ತರ ಪುಸ್ತಕಗಳಿಗೆ ಸಂಬಂಧಿಸಿದಂತೆ, ತೃತೀಯ ಮೌಲ್ಯಮಾಪನವಾದ ನಂತರ ನೀಡಲ್ಪಟ್ಟ ಅಂಕ, ಮೊದಲೆರಡು ಮೌಲ್ಯಮಾಪನಗಳಲ್ಲಿ ನೀಡಲ್ಪಟ್ಟ ಅಂಕಗಳಲ್ಲಿ ಅಂತಿಮವಾಗಿ ಯಾವ ಅಂಕಗಳನ್ನು ಪರಿಗಣಿಸಬೇಕೆಂಬ ಬಗ್ಗೆ ಕೂಡ ಯಾವುದೇ ಮಾಹಿತಿ ಇಲ್ಲದಿರುವುದರಿಂದ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಈ ಕೆಳಕಂಡಂತೆ ನಿಯಮವನ್ನು ಅಳವಡಿಸಿಕೊಳ್ಳಲಾಗಿದೆ.

1. **ಮೊದಲನೇ ಮೌಲ್ಯಮಾಪನ ಹಾಗೂ ಮರು ಮೌಲ್ಯಮಾಪನದ ನೀಡಲ್ಪಟ್ಟ ಅಂಕಗಳ ವ್ಯತ್ಯಾಸ ಶೇಕಡ 15ಕ್ಕಿಂತ ಕಡಿಮೆ ಇದ್ದಲ್ಲಿ, ಅವೆರಡರಲ್ಲಿನ ನಡುವೆ ಅತಿ ಹೆಚ್ಚು ಅಂಕಗಳನ್ನು ಗಣನೆಗೆ ತೆಗೆದುಕೊಳ್ಳುವುದು.**
2. **ಒಂದೊಮ್ಮೆ ವ್ಯತ್ಯಾಸ ಶೇಕಡ 15 ಹಾಗೂ ಅದಕ್ಕಿಂತ ಹೆಚ್ಚಿದ್ದಲ್ಲಿ ತೃತೀಯ (ಬೋರ್ಡ್) ಮೌಲ್ಯಮಾಪನವಾಗುತ್ತದೆ. ಮೂರೂ ಮೌಲ್ಯಮಾಪನಗಳ ಪೈಕಿ ನಿಕಟವಾಗಿರುವ ಎರಡು ಮೌಲ್ಯಮಾಪನ ಅಂಕಗಳ ಸರಾಸರಿ ಅಂಕಗಳನ್ನು ಅಂತಿಮಗೊಳಿಸುವುದು. (ಉದಾಹರಣೆ ಕೋಷ್ಟಕ ಈ ಕೆಳಕಂಡಂತಿದೆ)**

| ಮೌಲ್ಯಮಾಪನ | ಪ್ರಥಮ | ದ್ವಿತೀಯ | ತೃತೀಯ | ಪರಿಗಣಿಸಬೇಕಾದ ಅಂಕ |
|---|---|---|---|---|
| ನೀಡಲ್ಪಟ್ಟ ಅಂಕಗಳು ಉದಾ–1 | 22 | 42 | 25 | ಪ್ರಥಮ ಹಾಗೂ ತೃತೀಯ ಅಂಕಗಳ ಸರಾಸರಿ |
| ಉದಾ–2 | 15 | 30 | 55 | ಪ್ರಥಮ ಹಾಗೂ ದ್ವಿತೀಯ ಅಂಕಗಳ ಸರಾಸರಿ |
| ಉದಾ–3 | 10 | 25 | 28 | ದ್ವಿತೀಯ ಹಾಗೂ ತೃತೀಯ ಅಂಕಗಳ ಸರಾಸರಿ |

3. **ಒಂದೊಮ್ಮೆ ಮೂರು ಮೌಲ್ಯಮಾಪನಗಳಲ್ಲಿ ನೀಡಲಾದ ಅಂಕಗಳ ಪೈಕಿ ಯಾವುದಾದರೂ ಒಂದು ಮೌಲ್ಯಮಾಪನ ಅಂಕ ಉಳಿದೆರಡು ಮೌಲ್ಯಮಾಪನ ಅಂಕಗಳಿಂದ ಸಮಾನಾಂತರ ನಡುವಿನಲ್ಲಿದ್ದರೆ ಅಂತಹ ಸಂದರ್ಭದಲ್ಲಿ ಮೂರು ಅಂಕಗಳ ಪೈಕಿ ಹೆಚ್ಚು ಅಂಕಗಳಿರುವ ಎರಡು ಅಂಕಗಳ ಸರಾಸರಿ ತೆಗೆದು, ಸದರಿ ಅಂಕವನ್ನು ಅಂತಿಮಗೊಳಿಸುವುದು. (ಉದಾಹರಣೆ ಕೋಷ್ಟಕ ಈ ಕೆಳಕಂಡಂತಿದೆ)**

| ಮೌಲ್ಯಮಾಪನ | ಪ್ರಥಮ | ದ್ವಿತೀಯ | ತೃತೀಯ | ಪರಿಗಣಿಸಬೇಕಾದ ಅಂಕ |
|---|---|---|---|---|
| ನೀಡಲ್ಪಟ್ಟ ಅಂಕಗಳು ಉದಾ–1 | 20 | 40 | 30 | ದ್ವಿತೀಯ ಹಾಗೂ ತೃತೀಯ ಅಂಕಗಳ ಸರಾಸರಿ |
| ಉದಾ–2 | 25 | 35 | 15 | ಪ್ರಥಮ ಹಾಗೂ ದ್ವಿತೀಯ ಅಂಕಗಳ ಸರಾಸರಿ |
| ಉದಾ–3 | 28 | 15 | 41 | ಪ್ರಥಮ ಹಾಗೂ ತೃತೀಯ ಅಂಕಗಳ ಸರಾಸರಿ |

(…2)

ಅದರಂತೆ, ವಿವಿಧ ಸ್ನಾತಕ ಪದವಿಗಳಿಗೆ ಯು.ಯು.ಸಿ.ಎಂ.ಎಸ್. ತಂತ್ರಾಂಶದಲ್ಲಿ ಮೊದಲನೇ ಹಾಗೂ ಮರುಮೌಲ್ಯಮಾಪನಗಳಲ್ಲಿ ನೀಡಲಾದ ಅಂಕಗಳಲ್ಲಿ ಶೇ 15 ಮತ್ತು ಅದಕ್ಕಿಂತ ಹೆಚ್ಚು ಅಂಕಗಳ ವ್ಯತ್ಯಾಸವಿದ್ದಲ್ಲಿ ಅಂತಹ ಉತ್ತರ ಪತ್ರಿಕೆಗಳನ್ನು ತೃತೀಯ ಮೌಲ್ಯಮಾಪನ (ಬೋರ್ಡ್ ಮೌಲ್ಯಮಾಪನ) ಮಾಡಿಸಲು ಅನುವಾಗುವಂತೆ ಸೆಟ್ಟಿಂಗ್‌ಗಳನ್ನು ಮಾಡುವಂತೆ ಡಾ. ಭಾಗ್ಯಾವಾನ್ ಎಸ್. ಮುದಿಗೌಡ್ರ, ಯೋಜನಾ ನಿರ್ದೇಶಕರು, ಯು.ಯು.ಸಿ.ಎಂ.ಎಸ್ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಕಟ್ಟಡ, ಬೆಂಗಳೂರು ಇವರನ್ನು ಪತ್ರ ಮುಖೇನ ಕೋರಲಾಗಿ, ಸದರಿಯವರು ಮೇಲ್ಕಂಡ 03 ಅಂಶಗಳನ್ನು ಪರಿಗಣಿಸಿ, ತುಮಕೂರು ವಿಶ್ವವಿದ್ಯಾನಿಲಯದ ಪರೀಕ್ಷಾ ತಂತ್ರಾಂಶದಲ್ಲಿ ಅಳವಡಿಸಿರುತ್ತಾರೆ.

**ಈ ಮೇಲ್ಕಂಡ 03 ಅಂಶಗಳಂತೆ ಪ್ರಸ್ತುತ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿನ ವಿವಿಧ ಸ್ನಾತಕ ಪದವಿ ಪರೀಕ್ಷೆಗಳ ಮರುಮೌಲ್ಯಮಾಪನ ಮತ್ತು ತೃತೀಯ (ಬೋರ್ಡ್) ಮೌಲ್ಯಮಾಪನ ಪ್ರಕ್ರಿಯೆಗಳನ್ನು ಯು.ಯು.ಸಿ.ಎಂ.ಎಸ್ ತಂತ್ರಾಂಶದ ಮೂಲಕ ನಿರ್ವಹಿಸಲಾಗುತ್ತಿದೆ.**

**ಬಿ)** ತುಮಕೂರು ವಿಶ್ವವಿದ್ಯಾನಿಲಯದ **ಪರೀಕ್ಷಾ ಅಧಿಶಾಸನ 2021 ರ XXIV. Re-Valuation/Photocopy (U.G) ಕ್ರಮಸಂಖ್ಯೆ 4. ರಲ್ಲಿ Candidates who have secured 15% of maximum marks or more in each paper are eligible for re-valuation by paying prescribed fee.** ಎಂದಿರುತ್ತದೆ.

ಈ ಅನ್ವಯ ಶೇ.15 ಕ್ಕಿಂತ ಕಡಿಮೆ ಅಂಕ ಪಡೆದ ವಿದ್ಯಾರ್ಥಿಗಳಿಗೆ ಮರುಮೌಲ್ಯಮಾಪನ/ಛಾಯಾಪ್ರತಿಗಾಗಿ ಅರ್ಜಿ ಸಲ್ಲಿಸಲು ನಿಯಮಾನುಸಾರ ಅವಕಾಶವಿರುವುದಿಲ್ಲ. ಈ ಸಂಬಂಧ ಶೇ.15 ಕ್ಕಿಂತ ಕಡಿಮೆ ಅಂಕ ಪಡೆದ ಕೆಲವು ವಿದ್ಯಾರ್ಥಿಗಳು ಪರೀಕ್ಷಾ ವಿಭಾಗಕ್ಕೆ ಮನವಿ ಪತ್ರವನ್ನು ಸಲ್ಲಿಸಿ, ಮರುಮೌಲ್ಯಮಾಪನ/ಛಾಯಾಪ್ರತಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡಬೇಕೆಂದು ಕೋರಿರುತ್ತಾರೆ.

**ಈ ಸಂಬಂಧ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಶೇ. 15 ಕ್ಕಿಂತ ಕಡಿಮೆ ಅಂಕ ಪಡೆದಿರುವ ವಿದ್ಯಾರ್ಥಿಗಳಿಗೂ ಕೂಡ ಮರುಮೌಲ್ಯಮಾಪನ/ಛಾಯಾಪ್ರತಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶವನ್ನು ಯು.ಯು.ಸಿ,ಎಂ.ಎಸ್ ತಂತ್ರಾಂಶದಲ್ಲಿ ಕಲ್ಪಿಸಲಾಗಿರುತ್ತದೆ.**

**ಸದರಿ ಮೇಲ್ಕಂಡ ಎ ಮತ್ತು ಬಿ ಅಂಶಗಳ ಕುರಿತು ಎರಡನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ಮುಂದೆ ಸ್ಥಿರೀಕರಣ ಕೋರಿ ಮಂಡಿಸಿದೆ.**

| ವಿಷಯ ಸಂಖ್ಯೆ : | 2023-24 ಸಾವಿವಿಪ-2: ಪ.ವಿ.:02 :ದಿ.:21.02.2024 |
| --- | --- |

**ವಿಷಯ:** ವಿವಿಧ ಸ್ನಾತಕ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾದ ವಿದ್ಯಾರ್ಥಿಗಳನ್ನು ವಿಚಾರಣಾ ಸಮಿತಿಯ ಮುಂದೆ ವಿಚಾರಣೆಗೆ ಒಳಪಡಿಸಲಾಗಿದ್ದು, ಸದರಿ ಸಭೆಯ ನಡವಳಿಯ ಕುರಿತು.

* * * * * * * *

ತುಮಕೂರು ವಿಶ್ವವಿದ್ಯಾನಿಲಯದಲ್ಲಿ 2023 ರ ಮಾರ್ಚ್/ಏಪ್ರಿಲ್ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಪದವಿಗಳ I,III &V ನೇ ಸೆಮಿಸ್ಟರ್ ಮತ್ತು 2023 ರ ಅಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಪದವಿಗಳ II,IV &VI ನೇ ಸೆಮಿಸ್ಟರ್ (NEP, CBCS, & DOUBLE DURATION) ಸೆಮಿಸ್ಟರ್‌ಗಳ ಪರೀಕ್ಷಾ ಅಕ್ರಮ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಒಟ್ಟು 12 ವಿದ್ಯಾರ್ಥಿಗಳನ್ನು ದಿನಾಂಕ:12.12.2023 ರಂದು ಆಯೋಜಿಸಿದ್ದ ಪರೀಕ್ಷಾ ಅಕ್ರಮ ಚಟುವಟಿಕೆಗಳ ವಿಚಾರಣ ಸಮಿತಿ ಸಭೆಯ ಮುಂದೆ ಹಾಜರುಪಡಿಸಲಾಗಿತ್ತು. ಸದರಿ ಸಮಿತಿ ಸಭೆಯ ನಡಾವಳಿಗಳನ್ನು ಅನುಬಂಧ–1 ರಲ್ಲಿ ಸಲ್ಲಿಸುತ್ತಾ, ಸದರಿ ವಿಷಯವನ್ನು **ದಿನಾಂಕ:21.02.2024 ರಂದು ನಡೆಯವ ಎರಡನೇ ಸಾಮಾನ್ಯ ವಿದ್ಯಾ ವಿಷಯಕ ಪರಿಷತ್ತಿನ ಸಭೆಯ ಮುಂದೆ ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ.**

| ವಿಷಯ ಸಂಖ್ಯೆ: | **2023–24:ಸಾ.ವಿ.ವಿ.ಪ. –02– ಪಿಹೆಚ್.ಡಿ–01 ದಿನಾಂಕ:21.02.2024** |
| --- | --- |

ವಿಷಯ: **ಪ್ರತಿಕೋದ್ಯಮ ಮತ್ತು ಸಮೂಹ ಸಂವಹನ ಮತ್ತು ವಿದ್ಯುನ್ಮಾನ** ಪಿಹೆಚ್.ಡಿ ಅಧ್ಯಯನ ಮಂಡಳಿ (BOS) ಗಳನ್ನು ರಚಿಸಿ ಅಧಿಸೂಚಿಸಿರುವ ಸಂಬಂಧ ವಿದ್ಯಾವಿಷಯಕ ಪರಿಷತ್ ಸಭೆಯ ಸ್ಥಿರೀಕರಣಕ್ಕೆ ಮಂಡಿಸುವ ಕುರಿತು.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2023–24 ನೇ ಸಾಲಿನ **ಪ್ರತಿಕೋದ್ಯಮ ಮತ್ತು ಸಮೂಹ ಸಂವಹನ ಮತ್ತು ವಿದ್ಯುನ್ಮಾನ** ವಿಷಯಗಳ ಪಿಹೆಚ್.ಡಿ ಅಧ್ಯಯನ ಮಂಡಳಿ (BOS) ಗಳನ್ನು ರಚಿಸಿ ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ವಿಭಾಗವಾರು ಅಧಿಸೂಚನೆಗಳನ್ನು ಹೊರಡಿಸಲಾಗಿರುತ್ತದೆ.

ಸದರಿ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ.